ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದರ ಬಗ್ಗೆ

540. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯರುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಪೈಕಿ ಮಹಿಳಾ ವೈದ್ಯರುಗಳ ಸಂಖ್ಯೆ ಎಷ್ಟು?

ಇ) ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇದೆಯೆ? ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಕೊರತೆ ಇದೆ (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಈ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಹೆಚ್ಚು ಅಂಕಗಳನ್ನು ಗಳಿಸಿರುವವರನ್ನು ಹಾಗೂ (ಮೆರಿಟ್) ಪರಿಶಿಷ್ಟ ವರ್ಗದ ಅಭ್ಯರ್ಥಿಗಳನ್ನು ನೇರವಾಗಿ ವೈದ್ಯರುಗಳ ಹುದ್ದೆಗೆ ಆಯ್ಕೆ ಮಾಡಲು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) 3125 ಜಿಲ್ಲಾವರು ಮಾಹಿತಿ ಲಗತ್ತಿಸಿದೆ.

ಆ) 940

ಇ) ಹೌದು. ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಈ) ಈ ವಿಷಯದಲ್ಲಿ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆಯಲಾಗಿದ್ದು ಆಯ್ಕೆ ಪಟ್ಟಿ ಬಂದ ತಕ್ಷಣ ಭರ್ತಿ ಮಾಡಲಾಗುವುದು.

ಉ) ಹೌದು.

ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	ಮಂಜೂರಾದ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ	ಖಾಲಿ ಇರುವ ಸಂಖ್ಯೆ
1)	ಬೆಂಗಳೂರು	352	348	4
2)	ಕೋಲಾರ	195	184	11
3)	ಚಿತ್ರದುರ್ಗ	215	191	24
4)	ಶಿವಮೊಗ್ಗ	185	162	23
5)	ಚಿಕ್ಕಮಗಳೂರು	141	97	44
6)	ತುಮಕೂರು	139	126	13
7)	ಮೈಸೂರು	269	252	17
8)	ಕೊಡಗು	75	51	24
9)	ದಕ್ಷಿಣ ಕನ್ನಡ	179	132	47

10)	ಹಾಸನ	166	138	28
11)	ಮಂಡ್ಯ	140	127	13
12)	ಧಾರವಾಡ	264	247	17
13)	ಬೆಳಗಾವಿ	231	209	22
14)	ವಿಜಾಪುರ	153	137	16
15)	ಉತ್ತರ ಕನ್ನಡ	116	77	39
16)	ಗುಲ್ಬರ್ಗ	297	255	40
17)	ರಾಯಚೂರು	166	148	18
18)	ಬೀದರ್	97	64	23
19)	ಬಳ್ಳಾರಿ	207	170	37
		3585	**3125**	**460**

ರಾಜ್ಯದಲ್ಲಿರುವ ಖೋಟಾ ಪಡಿತರ ಕಾರ್ಡುಗಳ ಬಗ್ಗೆ

543.ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿ ಕಳೆದ ಜನವರಿಯಿಂದ ಇಲ್ಲಿಯವರೆಗೂ ಕೋಟಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾದ ಸಂಖ್ಯೆ ಎಷ್ಟು?

ಇ) ಪಡಿತರ ಚೀಟಿಗಳಲ್ಲಿ ಹೆಚ್ಚು ಯೂನಿಟ್‌ಗಳನ್ನು ತೋರಿಸಿ ಸರ್ಕಾರಕ್ಕೆ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಪಡಿತರ ಚೀಟಿ ನಿಜವಾದ ಯೂನಿಟ್‌ಗಳನ್ನು ಪತ್ತೆ ಹಚ್ಚಲು ಸರ್ಕಾರ ಪ್ರತಿಯೊಂದು ಪಡಿತರ ವಲಯದಲ್ಲೂ ಜಾಗೃತ ದಳವನ್ನು ನೇಮಿಸುವ ಬಗ್ಗೆ ಪರಿಶೀಲಿಸುತ್ತಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಒಟ್ಟು ಹಸಿರು ಕಾರ್ಡುಗಳು 31,11,395

ಇತರೆ 46,85,016

ಒಟ್ಟು 77,96,411

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.)

ಆ) ಕಳೆದ ಜನವರಿ 1990 ರಿಂದ ಅಕ್ಟೋಬರ್ 1990ರ ವರೆಗೆ 39,895 ಕೋಟಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಬಂದಿದೆ.

ಈ) ಪ್ರತಿ ವಿಧಾನ ಸಭಾ ಮತ ಕ್ಷೇತ್ರ ವ್ಯಾಪ್ತಿಗೆ ಒಂದರಂತೆ ಸಾರ್ವಜನಿಕ ವಿತರಣಾ ಪದ್ಧತಿ ಸಮೀಕ್ಷೆ